ರವರಿಗೆ,

ದಿನಾಂಕ:30-09-2023

ಠಾಣಾಧಿಕಾರಿಯವರಿಗೆ
ಕೆ.ಎಸ್.ಲೇಔಟ್ ಸಂಚಾರ ಪೊಲೀಸ್ ಠಾಣೆ
ಬೆಂಗಳೂರು ನಗರ

ಇಂದ,
ಪಾರ್ಥ ಕೆ ಬಿನ್ ಕೃಷ್ಣ ಬಿ 27ವರ್ಷ
ನಂ.ಪ್ಲಾಟ್ ನಂ.ಬಿ 206 ಸುಪ್ರಭಾತ ಡ್ರೀಂ ಬ್ರೀಜ್
ಅಪಾರ್ಟಮೆಂಟ್ ವಸಂತಪುರ ಮುಖ್ಯರಸ್ತೆ
ಉತ್ತರಹಳ್ಳಿ ಪೋಸ್ಟ್ ಬೆಂಗಳೂರು ನಗರ-61
ಮೊಬೈಲ್ ನಂ.9738559037

ವಿಷಯ; ನಮ್ಮ ತಾಯಿ ಶ್ರೀಮತಿ. ಪ್ರೇಮ ಎಸ್ 48ವರ್ಷ ಹಾಗೂ ತಂದೆ ಶ್ರೀ.ಕೃಷ್ಣ ಬಿ 58ವರ್ಷರವರಿಗೆ ಕಾರು ಡಿಕ್ಕಿ ಮಾಡಿ ಅಪಘಾತ ಮಾಡಿರುವ ಬಗ್ಗೆ ದೂರು.

**********

ನಾನು ಈ ಮೇಲ್ಕಂಡ ವಿಳಾಸದಲ್ಲಿ ತಂದೆ ತಾಯಿಯವರ ಜೊತೆ ವಾಸವಾಗಿದ್ದುಕೊಂಡು ನ್ಯೂಟ್ರೇನೋಸ್ ಕಂಪನಿಯಲ್ಲಿ ಪ್ರಾಡೆಕ್ಟ್ ಲೀಡ್ ಆಗಿ ಕೆಲಸ ಮಾಡಿಕೊಂಡು ಜೀವನ ಮಾಡಿಕೊಂಡಿರುತ್ತೇನೆ. ನಾವು ಒಕ್ಕಲಿಗ ಜಾತಿಗೆ ಸೇರಿರುತ್ತೇವೆ ದಿನಾಂಕ;30-09-2023 ರಂದು ನಾನು ಕನಕಪುರ ರಸ್ತೆ ಹತ್ತಿರ ಇರುವಾಗ ನನ್ನ ಮೊಬೈಲ್ ನಂಬರ್‌ಗೆ ನಮ್ಮ ಅಪಾರ್ಟಮೆಂಟ್ ನಲ್ಲಿರುವವರು ನನಗೆ ಕರೆ ಮಾಡಿ ನಮ್ಮ ತಂದೆ ಶ್ರೀ.ಕೃಷ್ಣ ಬಿ 58ವರ್ಷ ಮತ್ತು ನಮ್ಮ ತಾಯಿ ಶ್ರೀಮತಿ. ಪ್ರೇಮ ಎಸ್ 48ವರ್ಷರವರಿಗೆ ವಸಂತಪುರ ರಸ್ತೆಯಲ್ಲಿರುವ ನಮ್ಮ ಅಪಾರ್ಟಮೆಂಟ್ ಮುಂದೆ ಕಾರು ಡಿಕ್ಕಿ ಮಾಡಿದ್ದು ನಮ್ಮ ತಂದೆ ತಾಯಿಗೆ ಇಬ್ಬರಿಗೂ ಜಾಸ್ತಿ ಏಟಾಗಿದ್ದು ಇಬ್ಬರನ್ನು ಚಿಕಿತ್ಸೆಗೆ ಅಸ್ಟ್ರಾ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವುದಾಗಿ ನನಗೆ ತಿಳಿಸಿದ್ದು ನಾನು ಕೂಡಲೇ ಅಲ್ಲೇ ಹತ್ತಿರದಲ್ಲಿದ್ದ ಅಸ್ಟ್ರಾ ಆಸ್ಪತ್ರೆಯ ಏಮರ್ಜನ್ಸಿಗೆ ಹೋಗಿ ನೋಡಲಾಗಿ ನಮ್ಮ ತಾಯಿಗೆ ಮುಖ ಮತ್ತು ತಲೆಗೆ ತೀವ್ರ ರಕ್ತಗಾಯನಾಗಿ ಕಿವಿ ಮತ್ತು ಮೂಗು ಹಾಗೂ ಬಾಯಿಯಿಂದ ರಕ್ತ ಬಂದು ಚಿಕಿತ್ಸೆಗೆ ಬರುವ ದಾರಿಯ ಮಧ್ಯದಲ್ಲಿ ಮೃತಪಟ್ಟಿರುವುದಾಗಿ ನನಗೆ ವೈದ್ಯರು ತಿಳಿಸಿದರು ಹಾಗೂ ನಮ್ಮ ತಂದೆಗೆ ಎರಡು ಕಾಲು, ಹೊಟ್ಟೆ ಹಾಗೂ ಬೆನ್ನು ಮತ್ತು ತಲೆಗೆ ರಕ್ತಗಾಯವಾಗಿ ಚಿಕಿತ್ಸೆ ಪಡೆಯುತ್ತಿದ್ದರು. ನಂತರ ನಾನು ಅಲ್ಲಿದ್ದ ಜನರನ್ನು ಅಪಘಾತದ ಬಗ್ಗೆ ವಿಚಾರ ಮಾಡಲಾಗಿ ಅವರ ನನಗೆ ತಿಳಿಸಿದ್ದೇನೆಂದರೆ ದಿನಾಂಕ;30-09-2023 ರಂದು ರಾತ್ರಿ ಸುಮಾರು 09-45 ಗಂಟೆಯ ಸಮಯದಲ್ಲಿ ನಮ್ಮ ತಂದೆ ಶ್ರೀ.ಕೃಷ್ಣ ಬಿ 58ವರ್ಷ ಹಾಗೂ ನಮ್ಮ ತಾಯಿ ಶ್ರೀಮತಿ. ಪ್ರೇಮ ಎಸ್ 48ವರ್ಷರವರು ವಸಂತಪುರ ಮುಖ್ಯರಸ್ತೆಯ ನಮ್ಮ ಅಪಾರ್ಟಮೆಂಟ್ ಹತ್ತಿರ ಫುಟ್ ಪಾತ್ ಮೇಲೆ ನಡೆದುಕೊಂಡು ಕೋಣನಕುಂಟೆ ಕ್ರಾಸ್ ಕಡೆಗೆ ನಡೆದುಕೊಂಡು ಹೋಗುತ್ತಿರುವಾಗ ಅದೇ

ಸಮಯಕ್ಕೆ ಹಿಂದಿನಿಂದ ಅಂದರೆ ಉತ್ತರಹಳ್ಳಿ ಕಡೆಯಿಂದ ಕೋಣನಕುಂಟೆ ಕ್ರಾಸ್ ಕಡೆಗೆ ಬಂದ ಒಬ್ಬ ಕಾರಿನ ಚಾಲಕ ತನ್ನ ವಾಹನವನ್ನು ವೇಗವಾಗಿ ಮತ್ತು ನಿರ್ಲಕ್ಷತೆಯಿಂದ ಚಾಲನೆ ಮಾಡಿಕೊಂಡು ಬಂದು ಪುಟ್ ಪಾತ್ ಮೇಲೆ ನಡೆದುಕೊಂಡು ಹೋಗುತ್ತಿದ್ದ ನಮ್ಮ ತಂದೆ ಹಾಗು ತಾಯಿಗೆ ಡಿಕ್ಕಿ ಮಾಡಿ ನಂತರ ಪುಟ್ ಪಾತ್ ನಲ್ಲಿದ್ದ ವಿದ್ಯುತ್ ಕಂಬಕ್ಕೆ ಡಿಕ್ಕಿ ಮಾಡಿರುವುದಾಗಿ ಮತ್ತು ಡಿಕ್ಕಿ ಮಾಡಿದ ಕಾರಿನ ಚಾಲಕ ಅಪಘಾತ ನಡೆದ ಸ್ಥಳದಲ್ಲಿದ್ದು ಈತ ಚಲನಚಿತ್ರ ನಟನಾಗಿದ್ದು (ಕೌಸಲ್ಯ ಸುಪ್ರಜಾ ರಾಮ ಚಿತ್ರದಲ್ಲಿ ನಟಿಸಿರುವ) ಆತನ ಹೆಸರು ನಾಗಭೂಷನ್ ಎನ್.ಎಸ್ ಬಿನ್ ಶಿವಕುಮಾರ್ ಎನ್.ಪಿ 37ವರ್ಷ ನಂ.1700 17ನೇ ಎ ಮುಖ್ಯರಸ್ತೆ 7ನೇ ಕ್ರಾಸ್ ಜೆ ಪಿ ನಗರ ಬೆಂಗಳೂರು ನಗರ ನಿವಾಸಿ ಎಂದು ಅಪಘಾತ ನೋಡಿದ ನನ್ನ ತಂಗಿ ಕುಮಾರಿ.ಯಶಸ್ವಿನಿ ಕೆ 26ವರ್ಷ ಹಾಗೂ ನಮ್ಮ ಅಪಾರ್ಟಮೆಂಟ್ ವಾಸಿಯಾದ ಶ್ರೀ.ಅಕ್ಷಯ್ ಜೆ 28ವರ್ಷರವರು ನನಗೆ ತಿಳಿಸಿದರು. ನಂತರ ಆಸ್ಪತ್ರೆಗೆ ಸಂಚಾರ ಪೊಲೀಸರು ಬಂದರು ನಾವು ಅವರಿಗೆ ಅಪಘಾತದ ವಿಷಯವನ್ನು ತಿಳಿಸಿ ಅಪಘಾತ ನಡೆದ ಸ್ಥಳಕ್ಕೆ ಬಂದು ನೋಡಲಾಗಿ ಡಿಕ್ಕಿ ಮಾಡಿದ ಕಾರು ಅಪಘಾತ ನಡೆದ ಸ್ಥಳದಲ್ಲಿಯೇ ನಿಂತಿದ್ದು ಕಾರ್ ನಂಬರ್ ನೋಡಲಾಗಿ ಕೆಎ–09–ಎಂಜಿ–5335 ಆಗಿದ್ದು ಇದರ ಮುಂಭಾಗ ಜಖಂಗೊಂಡಿತ್ತು. ನಮ್ಮ ತಂದೆ ಅಸ್ತ್ರಾ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗೆ ಬನ್ನೇರಘಟ್ಟ ರಸ್ತೆಯ ಪೋರ್ಟಿಸ್ ಆಸ್ಪತ್ರೆಗೆ ದಾಖಲಾಗಿರುತ್ತಾರೆ. ಆದ್ದರಿಂದ ಈ ಅಪಘಾತಕ್ಕೆ ಕಾರಣನಾದ ಕಾರ್ ನಂಬರ್ ಕೆಎ09–ಎಂಜಿ–5335ರ ಚಾಲಕನ ಮೇಲೆ ಸೂಕ್ತ ಕಾನೂನು ರೀತಿಯ ಕ್ರಮ ಜರುಗಿಸಬೇಕೆಂದು ಕೋರಿಕೊಳ್ಳುತ್ತೇನೆ.

ಇಂತಿ ವಿಶ್ವಾಸಿ

Partha.S